**All India Radio: Bangalore**
**National Bulletin In Kannada**
**29.12.2025  1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**29.12.2025  1.10 pm**

**<><><*><><<>**

ಮುಖ್ಯಾಂಶಗಳು

**೧. ಜೆಮ್‌ಶೆಡ್‌ಪುರದಲ್ಲಿಂದು ಓಲ್ ಚಿಕಿ ಲಿಪಿಯ ಶತಮಾನೋತ್ಸವ ಸಮಾರಂಭ ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು**

**೨. ವಿಕಸಿತ ಭಾರತ ಜಿ ರಾಮ್ ಜಿ ಯೋಜನೆಯಡಿ ರಾಜ್ಯಗಳಿಗೆ ೧೭ ಸಾವಿರ ಕೋಟಿ ರೂಪಾಯಿಗಳ ನಿವ್ವಳ ಲಾಭ ಸಾಧ್ಯತೆ - ಎಸ್‌ಬಿಐ ವರದಿಯಲ್ಲಿ ಉಲ್ಲೇಖ**

**೩. ದೀರ್ಘ ಶ್ರೇಣಿಯ ಕಾರ್ಯತಂತ್ರದ ಕ್ರೂಸ್ ಕ್ಷಿಪಣಿ ಪರೀಕ್ಷೆ ನಡೆಸಿದ ಉತ್ತರ ಕೊರಿಯಾ**

**೪. ಫಿಡೆ ವಿಶ್ವ ರ‍್ಯಾಪಿಡ್ ಚೆಸ್ ಚಾಂಪಿಯನ್‌ಶಿಪ್; ಭಾರತದ ಅರ್ಜುನ್ ಎರಿಗೈಸಿ, ಕೊನೆರೂ ಹಂಪಿಗೆ ಕಂಚು**

**<><><*><><<>**

ಜಾರ್ಖಂಡ್ ಜಮ್‌ಶಡ್‌ಪುರದಲ್ಲಿಂದು ಸಂತಾಲಿ ಭಾಷೆಯ ಓಲ್ ಚಿಕಿ ಲಿಪಿಯ ಶತಮಾನೋತ್ಸವ ಸಮಾರಂಭವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು, ಜಹಾರ್ತನ್‌ನಲ್ಲಿ ಓಲ್ ಚಿಕಿ ಲಿಪಿಯ ಪಿತಾಮಹ ಪಂಡಿತ್ ರಘುನಾಥ್ ಮುರ್ಮು ಅವರಿಗೆ ಗೌರವ ನಮನ ಸಲ್ಲಿಸಿದರು. ಇಂದು ಸಂಜೆ ರಾಷ್ಟ್ರಪತಿಯವರು, ಜಮ್‌ಶಡ್‌ಪುರದ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯ-ಎನ್‌ಐಟಿ ೧೫ನೇ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ನಾಳೆ ಅವರು, ದುಮ್ಲಾದಲ್ಲಿ ನಡೆಯುವ ಅಂತಾರಾಜ್ಯ ಜನಸಾಂಸ್ಕೃತಿಕ ಸಮಾಗಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

**<><><*><><<>**

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಇಂದು ತಿರುವನಂತಪುರಂಗೆ ಆಗಮಿಸಿದರು. ಅವರನ್ನು ವಿಮಾನ ನಿಲ್ದಾಣದಲ್ಲಿ ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಕೆ. ಕೈಲಾಶ್‌ನಾಥನ್, ಮುಖ್ಯಮಂತ್ರಿ ಎನ್. ರಂಗಸ್ವಾಮಿ, ವಿಧಾನಸಭಾ ಸ್ಪೀಕರ್ ಆರ್. ಸೆಲ್ವಂ ಸೇರಿದಂತೆ ಸಚಿವರು ಆತ್ಮೀಯವಾಗಿ ಬರಮಾಡಿಕೊಂಡರು. ಎರಡು ದಿನಗಳ ಈ ಭೇಟಿಯಲ್ಲಿ, ಅವರು ಪಲಾಯಂ ಎಲ್.ಎಂ.ಎಸ್.ನಲ್ಲಿ ತಿರುವನಂತಪುರ ಉತ್ಸವದ ಭಾಗವಾಗಿ ಆಯೋಜಿಸಲಾದ ಸ್ನೇಹಸಂಗಮ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಾಳೆ ಅವರು ವರ್ಕಳದ ಶಿವಗಿರಿಗೆ ಭೇಟಿ ನೀಡಲಿದ್ದಾರೆ.

ನಂತರ ಉಪರಾಷ್ಟ್ರಪತಿ ಅವರು, ನಳಂಚಿರಾದ ಮಾರ್ ಇವಾನಿಯೋಸ್ ಕಾಲೇಜಿನ ಅಮೃತ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

**<>><><*><><<>**

ವಿಕಸಿತ ಭಾರತ - ಗ್ಯಾರಂಟಿ ರೋಜ್‌ಗಾರ್ ಮತ್ತು ಆಜೀವಿಕಾ ಮಿಷನ್ ; ವಿಕಸಿತ ಭಾರತ ಜಿ ರಾಮ್ ಜಿ ಕಾಯ್ದೆಯು ಕಳೆದ ೭ ವರ್ಷಗಳ ಸರಾಸರಿ ಹಂಚಿಕೆಗೆ ಹೋಲಿಸಿದರೆ ಹೆಚ್ಚಿನ ರಾಜ್ಯಗಳಿಗೆ ೧೭ ಸಾವಿರ ಕೋಟಿ ರೂಪಾಯಿಗಳ ನಿವ್ವಳ ಲಾಭ ನೀಡುವ ಸಾಧ್ಯತೆಯಿದೆ. ಈ ಕಾಯ್ದೆಯು ೨೦ ವರ್ಷಗಳ ಹಳೆಯದಾದ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ-೨೦೦೫ ಅನ್ನು ಬದಲಾಯಿಸಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಂಶೋಧನಾ ವರದಿಯ ಪ್ರಕಾರ, ಈ ಕಾಯ್ದೆಯು ರಾಜ್ಯಗಳಿಗೆ ಒಟ್ಟಾರೆ ನಿಧಿ ವಿತರಣೆಯನ್ನು ಸುಧಾರಿಸುತ್ತದೆ. ವಿಕಸಿತ ಭಾರತ ಜಿ ರಾಮ್ ಜಿ ಕಾಯ್ದೆಯ ಮೂಲಕ ಹಿಂದಿನ ಮನ್ರೇಗಾ ಕಾಯ್ದೆಯ ಪುನರ್ರಚನೆಯು ಪರಿವರ್ತನಾ ಅಭ್ಯಾಸಗಳು ಮತ್ತು ತಂತ್ರಗಳನ್ನು ಸಂಯೋಜಿಸಲು ಪ್ರಯತ್ನಿಸುತ್ತದೆ. ಸ್ಪರ್ಧಾತ್ಮಕ ಯೋಜನಾ ಗುರುತಿಸುವಿಕೆ, ಉತ್ಪಾದಕ ಆಸ್ತಿ ಸೃಷ್ಟಿ, ವರ್ಧಿತ ಆದಾಯ ಉತ್ಪಾದನೆ ಮತ್ತು ಪರಿಣಾಮಕಾರಿ ಮೇಲ್ವಿಚಾರಣಾ ಕಾರ್ಯ ವಿಧಾನಕ್ಕೆ ಸವಾಲುಗಳನ್ನು ಪರಿಹರಿಸುವತ್ತ ಗಮನ ಹರಿಸುತ್ತಿದೆ.

ಈ ಕಾಯ್ದೆಯು ಪ್ರತಿ ಗ್ರಾಮೀಣ ಕುಟುಂಬಕ್ಕೆ ವಾರ್ಷಿಕ ೧೨೫ ದಿನಗಳ ಕೂಲಿ ಉದ್ಯೋಗವನ್ನು ಖಾತರಿಪಡಿಸುತ್ತದೆ.

**<>><><*><><<>**

ಉತ್ತರಾಖಂಡದ ಚಮೋಲಿ ಜಿಲ್ಲೆಯ ಗೌಚರ್‌ನಲ್ಲಿಂದು ನಡೆಯಲಿರುವ ರಾಜ್ಯಮಟ್ಟದ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭಾಗವಹಿಲಿಸದ್ದಾರೆ. ಈ ಕುರಿತು ಮಾಹಿತಿ ನೀಡಿದ ಉತ್ತರಾಖಂಡ ಕೃಷಿ ಸಚಿವ ಗಣೇಶ್ ಜೋಶಿ, ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು, ರೈತರೊಂದಿಗೆ ಸಂವಾದ ನಡೆಸಲಿದ್ದಾರೆ. ರಾಜ್ಯದ ೯೫ ಕಡೆಗಳಲ್ಲಿ ಕಾರ್ಯಕ್ರಮದ ನೇರ ಪ್ರಸಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ರೈತರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸರ್ಕಾರಿ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯ ಸರ್ಕಾರ ಪ್ರತಿ ತಿಂಗಳ ೨ನೇ ಗುರುವಾರದಂದು ರೈತರ ದಿನವನ್ನು ಆಚರಿಸಲು ನಿರ್ಧರಿಸಿದೆ. ಇದರ ಉದ್ಘಾಟನೆಯನ್ನು ಕೇಂದ್ರ ಕೃಷಿ ಸಚಿವರು ಹಾಗೂ ಉತ್ತರಾಖಂಡ್ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ನೆರವೇರಿಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

<>><><*><><<>

೨೦೨೫ನೇ ವರ್ಷ ಭಾರತದ ಅಭಿವೃದ್ಧಿ ಪ್ರಯಾಣದಲ್ಲಿ ನಿರ್ಣಾಯಕ ಅಧ್ಯಾಯವಾಗಿದೆ. ನೀತಿಗಳು ಪ್ರಗತಿಯಾಗಿ ಮತ್ತು ಉದ್ದೇಶವು ಪರಿಣಾಮಕಾರಿಯಾಗಿ ರೂಪಾಂತರಗೊಂಡಿದೆ. ಇಂದು ಈ ವಿಶೇಷ ಸರಣಿ ಸುಧಾರಣೆಗಳ ವರ್ಷದಲ್ಲಿ ೨೦೨೫ರಲ್ಲಿ ರಕ್ಷಣಾ ವಲಯದಲ್ಲಿ ಭಾರತದ ಪ್ರಗತಿ ಕುರಿತು ವಿಶೇಷ ವರದಿ ಮೂಡಿಬರಲಿದೆ.

**ಧ್ವನಿ: ವಿಶೇಷ ವರದಿ (ಗಿರೀಶ್ ೧ ನಿಮಿಷ ೫೮ ಸೆಕೆಂಡ್‌ಗಳು)**

**<>><><*><><<>**

೨೦೨೫ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ತನ್ನ ರಾಷ್ಟ್ರೀಯ ಭದ್ರತಾ ವಿಷಯದಲ್ಲಿ ಬಲವರ್ಧನೆಯನ್ನು ಕಂಡಿದೆ. ಈ ವರ್ಷದಲ್ಲಿ ಭಯೋತ್ಪಾದನೆ ಕುರಿತು ಸರ್ಕಾರ ದೃಢವಾದ ೫ ಮಾನದಂಡಗಳನ್ನು ಪ್ರಕಟಿಸಿದೆ. ಅವುಗಳೆಂದರೆ, ಭಯೋತ್ಪಾದಕ ದಾಳಿಗಳಿಗೆ ಬಲವಾದ ಪ್ರತಿಕ್ರಿಯೆ, ಪರಮಾಣು ಬ್ಲಾಕ್‌ಮೇಲ್‌ಗೆ ಶೂನ್ಯ ಸಹಿಷ್ಣುತೆ, ಭಯೋತ್ಪಾದಕರು ಮತ್ತು ಅವರ ಪ್ರಯೋಜಕರಲ್ಲಿ ಯಾವುದೇ ವ್ಯತ್ಯಾಸವಿಲ್ಲ, ಯಾವುದೇ ಮಾತುಕತೆಯಲ್ಲಿ ಭಯೋತ್ಪಾದನೆ ಮೊದಲು ಹಾಗೂ ದೇಶದ ಸಾರ್ವಭೌಮತ್ವದ ಬಗ್ಗೆ ರಾಜಿಯಾಗದ ನಿಲುವು ಆಗಿದೆ. ಈ ಸಂಕಲ್ಪವನ್ನು ಆಪರೇಷನ್ ಸಿಂದೂರ ಮೂಲಕ ಸ್ಪಷ್ಟವಾಗಿ ಪ್ರದರ್ಶಿಸಲಾಯಿತು. ಈ ವರ್ಷದ ಮೇ ೭ ರಂದು ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ ಭಾರತ ಅತ್ಯಂತ ಮಹತ್ವದ ಮಿಲಿಟರಿ ದಾಳಿಗಳನ್ನು ನಡೆಸಿತು. ಭಾರತೀಯ ಭದ್ರತಾ ಪಡೆಗಳು, ಪಾಕಿಸ್ತಾನದ ಪ್ರದೇಶದೊಳಗೆ ನುಗ್ಗಿ, ಭಯೋತ್ಪಾದಕ ಮೂಲಸೌಕರ್ಯಗಳನ್ನು ನಾಶ ಮಾಡಿತು ಹಾಗೂ ಸುಮಾರು ೧೦೦ ಭಯೋತ್ಪಾದಕರನ್ನು ಹೊಡೆದುರುಳಿಸಿತು.

ಪಾಕಿಸ್ತಾನದ ೧೧ ವಾಯುನೆಲೆಗಳ ಮೇಲೆ ಮೇ ೧೦ ರಂದು ನಿಖರವಾಗಿ ದಾಳಿ ನಡೆಸಲಾಯಿತು. ಈ ಕಾರ್ಯಾಚರಣೆಯು ದೇಶೀಯ ಸಾಮರ್ಥ್ಯಗಳ ಮೇಲೆ ಹೆಚ್ಚಿನ ಅವಲಂಬನೆ ಹೊಂದಿದ್ದಕ್ಕಾಗಿ ಜಾಗತಿಕ ಗಮನ ಸೆಳೆಯಿತು. ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಗಳು, ರಫೇಲ್ ಯುದ್ಧ ವಿಮಾನಗಳು ಮತ್ತು ಡ್ರೋನ್‌ಗಳನ್ನು ದಾಳಿಗಳಲ್ಲಿ ಬಳಸಲಾಯಿತು. ಇದು ಭಾರತದ ಬೆಳೆಯುತ್ತಿರುವ ತಾಂತ್ರಿಕ ಶಕ್ತಿಯನ್ನು ಪ್ರದರ್ಶಿಸಿತು. ಕಾರ್ಯಾಚರಣೆಯ ದೃಢ ಸಂಕಲ್ಪದ ಜೊತೆಗೆ ಭಾರತದ ರಕ್ಷಣಾ ಸಾಮರ್ಥ್ಯಗಳು ಅಭೂತಪೂರ್ವ ಬೆಳವಣಿಗೆ ಕಂಡಿತು. ರಕ್ಷಣಾ ಉತ್ಪಾದನೆಯು ಒಂದು ಲಕ್ಷ ೫೪ ಸಾವಿರ ಕೋಟಿ ರೂಪಾಯಿಗಳನ್ನು ದಾಟಿತು. ೨೦೨೫-೨೬ರ ರಕ್ಷಣಾ ಬಜೆಟ್ ೬ ಲಕ್ಷ ೮೧ ಸಾವಿರ ಕೋಟಿ ರೂಪಾಯಿಗಳಿಗೆ ತಲುಪಿತು. ಯುದ್ಧ ಹೆಲಿಕಾಪ್ಟರ್‌ಗಳು ಭಾರತೀಯ ನೌಕಾಪಡೆಗೆ ರಫೇಲ್-ಎಂ ಯುದ್ಧ ವಿಮಾನಗಳು, ಕಣ್ಗಾವಲು ವ್ಯವಸ್ಥೆ ಸೇರಿದಂತೆ ೪ ಲಕ್ಷ ೩೦ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ರಕ್ಷಣೆ ಯೋಜನೆಗಳನ್ನು ಅನುಮೋದಿಸಲಾಯಿತು.

ಈ ವರ್ಷ ಯುದ್ಧನೌಕೆಗಳು ಮತ್ತು ಜಲಾಂತಾರ್ಗಮಿ ನೌಕೆಗಳ ನಿಯೋಜನೆ, ಅಗ್ನಿಪ್ರೈಮ್ ಕ್ಷಿಪಣಿಯ ರೈಲು ಆಧಾರಿತ ಉಡಾವಣಾ ಪರೀಕ್ಷೆ ಮತ್ತು ಭಾರತದಲ್ಲಿ ತಯಾರಿಸಿದ ಎಕೆ-೨೦೩ ರೈಫಲ್‌ಗಳು ಜಾಗತಿಕ ರಕ್ಷಣಾ ಮಾರುಕಟ್ಟೆಗೆ ಬಿಡುಗಡೆಯಾಯಿತು.

**<>><><*><><<>**

ಹಳದಿ ಸಮುದ್ರದಲ್ಲಿ ದೀರ್ಘ ಶ್ರೇಣಿಯ ಕಾರ್ಯತಂತ್ರದ ಕ್ರೂಸ್ ಕ್ಷಿಪಣಿಗಳ ಪರೀಕ್ಷಾ ಉಡಾವಣೆಯನ್ನು ಉತ್ತರ ಕೋರಿಯಾ ಅಧ್ಯಕ್ಷ ಕಿಮ್ ಜಾಂಗ್ ಉನ್ ವೀಕ್ಷಿಸಿದರು. ಕ್ಷಿಪಣಿಗಳು ಯಶಸ್ವಿಯಾಗಿ ಗುರಿಗಳನ್ನು ತಲುಪಿದವು. ಭದ್ರತಾ ಬೆದರಿಕೆಗಳ ನಡುವೆ ಉತ್ತರ ಕೊರಿಯಾದ

ಪರಮಾಣು ನಿರೋಧಕದ ನಿಯಮಿತ ಪರಿಶೀಲನೆಗಳ ಅಗತ್ಯವನ್ನು ಇದೇ ವೇಳೆ ಕಿಮ್ ಜಾಂಗ್ ಉನ್ ಒತ್ತಿ ಹೇಳಿದರು.

**<>><><*><><<>**

ಬಾಂಗ್ಲಾದೇಶದಲ್ಲಿ ಈ ವರ್ಷದ ಜೂನ್ ಮತ್ತು ಡಿಸೆಂಬರ್ ನಡುವೆ ಹಿಂದೂ ಅಲ್ಪಸಂಖ್ಯಾತರ ವಿರುದ್ಧ ಧರ್ಮನಿಂದನೆಯ ಆರೋಪಗಳಿಗೆ ಸಂಬಂಧಿಸಿದ ಕನಿಷ್ಠ ೭೧ ಘಟನೆಗಳು ವರದಿಯಾಗಿವೆ ಎಂದು ಬಾಂಗ್ಲಾದೇಶ ಅಲ್ಪಸಂಖ್ಯಾತರ ಮಾನವ ಹಕ್ಕುಗಳ ಒಕ್ಕೂಟ ತಿಳಿಸಿದೆ. ಚಂದ್‌ಪುರ, ಚಟ್ಟೋಗ್ರಾಮ್, ದಿನಜ್‌ಪುರ, ಲಾಲ್ಮೊನಿರ್ಹತ್, ಸುನಮ್‌ಗಂಜ್, ಖುಲ್ನಾ, ಕೊಮಿಲ್ಲಾ, ಗಾಜಿಪುರ್, ತಂಗೈಲ್ ಮತ್ತು ಸಿಲ್ಹೆಟ್ ಸೇರಿದಂತೆ ೩೦ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಈ ಪ್ರಕರಣಗಳು ದಾಖಲಾಗಿವೆ ಎಂದು ಅದು ಹೇಳಿದೆ.

**<>><><*><><<>**

ಕತಾರ್‌ನ ದೋಹಾದಲ್ಲಿ ನಡೆದ ಫಿಡೆ ವಿಶ್ವ ರ್ಯಾಪಿಡ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಅರ್ಜುನ್ ಎರಿಗೈಸಿ ಮತ್ತು ಕೊನೆರೂ ಹಂಪಿ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಕಂಚಿನ ಪದಕ ಗೆದ್ದರು. ಮ್ಯಾಗ್ನಸ್ ಕಾರ್ಲ್‌ಸನ್ -೨೦೨೫ರ ಫಿಡೆ ವಿಶ್ವ ರ್ಯಾಪಿಡ್ ಚೆಸ್ ಚಾಂಪಿಯನ್ ಆಗಿ ಹೊರ ಹೊಮ್ಮಿದರು. ಇದೇ ವೇಳೆ ಫಿಡೆ ಮಹಿಳಾ ವಿಶ್ವ ರ್ಯಾಪಿಡ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಅಲೆಗ್ಸಾಂಡ್ರಾ ಗೊರಿಯಾಕ್ಸಿನಾ ಪ್ರಶಸ್ತಿ ವಿಜೇತರಾದರು.

**<>><><*><><<>**

ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯವನ್ನು ಅಖಿಲ ಭಾರತ ಶಿಯಾ ವೈಯಕ್ತಿಕ ಕಾನೂನು ಮಂಡಳಿ ಖಂಡಿಸಿದೆ. ಇಸ್ಲಾಂ ಯಾವುದೇ ಮುಗ್ಧ ವ್ಯಕ್ತಿಯನ್ನು ಕೊಲ್ಲುವುದನ್ನು ನಿಷೇಧಿಸುತ್ತದೆ ಮತ್ತು ಧರ್ಮದ ಹೆಸರಿನಲ್ಲಿ ಈ ರೀತಿ ಮಾಡುವವರು ಅದರಿಂದ ದೂರವಿರಬೇಕು ಎಂದು ಅದು ಹೇಳಿದೆ. ಲಕ್ನೋದ ಬಾರಾ ಇಮಾಂಬರಾದಲ್ಲಿ ನಡೆದ ಭಾರತ ಶಿಯಾ ವೈಯಕ್ತಿಕ ಕಾನೂನು ಮಂಡಳಿಯ ವಾರ್ಷಿಕ ಸಮಾವೇಶದಲ್ಲಿ ಈ ಖಂಡನೆ ವ್ಯಕ್ತವಾಗಿದೆ. ಭಾರತದ ವಿವಿಧ ರಾಜ್ಯಗಳ ಜೊತೆಗೆ ಬಾಂಗ್ಲಾದೇಶ ಮತ್ತು ನೇಪಾಳದ ಉಲೇಮಾ ಮತ್ತು ವಿದ್ವಾಂಸರು ಇದರಲ್ಲಿ ಭಾಗವಹಿಸಿದ್ದರು. ವಿಶ್ವಾದ್ಯಂತ ನಡೆಯುವ ಪ್ರತಿಯೊಂದು ಭಯೋತ್ಪಾದನಾ ಕೃತ್ಯವು ಅತ್ಯಂತ ಖಂಡನೀಯ. ಭಯೋತ್ಪಾದನೆಯನ್ನು ನಡೆಸುವವರು ಅಥವಾ ಭಯೋತ್ಪಾದಕರನ್ನು ಪೋಷಿಸುವವರು ಅಥವಾ ಅವರಿಗೆ ಯಾವುದೇ ರೀತಿಯ ಸಹಾಯವನ್ನು ಒದಗಿಸುವವರು ಮಾನವೀಯತೆಯ ಶತ್ರುಗಳು ಎಂದು ಭಾರತ ಶಿಯಾ ವೈಯಕ್ತಿಕ ಕಾನೂನು ಮಂಡಳಿಯ ಪ್ರಧಾನ ಕಾರ್ಯದರ್ಶಿ ಮೌಲಾನಾ ಯಾಸೂಬ್ ಅಬ್ಬಾಸ್ ಹೇಳಿದರು.

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**